ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಭವನದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ವಿಭಾಗ, ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಉಪ ನಿರ್ದೇಶಕರು, ಭೂ ದಾಖಲೆ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಗೂ ಎಲ್ಲಾ ತಾಲ್ಲೂಕಿನ ತಹಶೀಲ್ದಾರು ಹಾಗೂ ಇತರ ಅಧಿಕಾರಿಗಳು ಒಳಗೊಂಡಂತೆ ದಿನಾಂಕ: 16-07-2025 ರಂದು ಅಪರಾಹ್ನ 2.30 ಗಂಟೆಗೆ ನಡೆಸಿದ ಜಿಲ್ಲಾ ತಜ್ಞ ಸಮಿತಿಯ (District Expert Committee) ಸಭೆಯ ನಡಾವಳಿಗಳು

**ಉಪಸ್ಥಿತರು:**

1. ಶ್ರೀಮತಿ ಗೀತಾ ಸಿ ಡಿ ಕ.ಆ.ಸೇ, ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ.
2. ಶ್ರೀ ವಿವೇಕ ಟಿ ಕವರಿ, ಕ.ಅ.ಸೇ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ
3. ಶ್ರೀ ಮೋಹನ ಶಿವಣ್ಣವರ, ಉಪ ನಿರ್ದೇಶಕರು, ಭೂ ದಾಖಲೆ, ಧಾರವಾಡ
4. ಶ್ರೀ ಕಾಶಿನಾಥ ಭದ್ರಣ್ಣವರ, ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಧಾರವಾಡ.
5. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಧಾರವಾಡ ರವರ ಪರವಾಗಿ ಶ್ರೀಮತಿ. ಲಲಿತಾ ಹಾವೇರಿ ಪ್ರ.ವ್ಯ.
6. ಶ್ರೀ ಮಂಜುನಾಥ ದಾಸಪ್ಪನವರ, ತಹಶೀಲ್ದಾರ ಅಣ್ಣಿಗೇರಿ (ವಿಡಿಯೋ ಸಂವಾದ ಮೂಲಕ)
7. ಶ್ರೀ ದೊಡ್ಡಪ್ಪ ಹೂಗಾರ, ತಹಶೀಲ್ದಾರ, ಧಾರವಾಡ. (ವಿಡಿಯೋ ಸಂವಾದ ಮೂಲಕ)
8. ಶ್ರೀ ಬಸವರಾಜ ಬೆಣ್ಣೆಶಿರೂರು, ತಹಶೀಲ್ದಾರ ಅಳ್ನಾವರ & ಕಲಘಟಗಿ. (ವಿಡಿಯೋ ಸಂವಾದ ಮೂಲಕ)
9. ಶ್ರೀ. ಜೆ ಬಿ ಮಜ್ಜಗಿ, ತಹಶೀಲ್ದಾರ ಹುಬ್ಬಳ್ಳಿ ಗ್ರಾಮೀಣ. (ವಿಡಿಯೋ ಸಂವಾದ ಮೂಲಕ)
10. ಶ್ರೀ ಕಲ್ಲನಗೌಡ ಪಾಟೀಲ್, ತಹಶೀಲ್ದಾರ ಹುಬ್ಬಳ್ಳಿ ಶಹರ (ವಿಡಿಯೋ ಸಂವಾದ ಮೂಲಕ)
11. ಶ್ರೀ ರಾಜು ಮರ್ವಾಕರ, ತಹಶೀಲ್ದಾರ, ಕುಂದಗೋಳ. (ವಿಡಿಯೋ ಸಂವಾದ ಮೂಲಕ)
12. ಶ್ರೀ ಸುಧೀರ ಸವಕಾರ, ತಹಶೀಲ್ದಾರ ನವಲಗುಂದ. (ವಿಡಿಯೋ ಸಂವಾದ ಮೂಲಕ)
13. ಶ್ರೀ ಕಿರಣಕುಮಾರ ಕರತಂಗಿ, ವಲಯ ಅರಣ್ಯಾಧಿಕಾರಿ, ಧಾರವಾಡ ವಲಯ.
14. ಶ್ರೀ ಅರುಣಕುಮಾರ ಅಷ್ಟಗಿ, ವಲಯ ಅರಣ್ಯಾಧಿಕಾರಿ, ಕಲಘಟಗಿ ವಲಯ.
15. ಶ್ರೀಮತಿ ಶಕುಂತಲ, ವಲಯ ಅರಣ್ಯಾಧಿಕಾರಿ, ಅಳ್ನಾವರ ವಲಯ.
16. ಶ್ರೀ ಎಸ್. ಬಿ. ಮಾಲಾಪುರ, ವಲಯ ಅರಣ್ಯಾಧಿಕಾರಿ, ಸರ್ವೇ ಧಾರವಾಡ

*********

ಸಭೆಗೆ ಸೇರಿದ್ದ ಸಭಾಧ್ಯಕ್ಷರಿಗೆ ಹಾಗೂ ಎಲ್ಲ ಅಧಿಕಾರಿಗಳಿಗೆ ಸಮಿತಿ ಪರವಾಗಿ ಸಮಿತಿಯ ಸಂಚಾಲಕರಾದ ಶ್ರೀ ವಿವೇಕ ಟಿ ಕವರಿ, ಕ.ಅ.ಸೇ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ರವರು ಸ್ವಾಗತಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಬಗ್ಗೆ ವಿಷಯ ಪ್ರಸ್ತುತ ಪಡಿಸಲು ಅದೇಶಿಸಿದ ಮೇರೆಗೆ ಶ್ರೀ ವಿವೇಕ ಟಿ ಕವರಿ, ಕ.ಅ.ಸೇ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ರವರು ಈ ಕೆಳಕಂಡಂತೆ ಸಭೆಯನ್ನುದ್ದೇಶಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಸದರಿ ಸಮಿತಿಯ ಉದ್ದೇಶಗಳನ್ನು ಈಗಾಗಲೇ ಎಲ್ಲರೂ ತಿಳಿದಿದ್ದು, ಸದರಿ ಮಾನ್ಯ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ- FEE - 185- FAF 2011 Bengaluru ದಿನಾಂಕ 06-03-2025 ರ ಆದೇಶದಂತೆ, ಜಿಲ್ಲಾ ತಜ್ಞ ಸಮಿತಿಯ ಈ ಸಭೆಯಲ್ಲಿ ಮುಂದಿನ ಕಾರ್ಯಗಳನ್ನು ಈ ಕೆಳಕಂಡಂತೆ ಚರ್ಚಿಸಲಾಯಿತು.

1. **NOTIFIED OR DECLARED FORESTS: (ಅಧಿಸೂಚಿತ ಅರಣ್ಯ ಪ್ರದೇಶಗಳು)**

   ಸದರಿ ವಿಷಯವಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ರವರು ಮಾತನಾಡಿ ಅರಣ್ಯ ಕಾಯ್ದೆಯ ಪ್ರಕಾರ ಅಧಿಸೂಚನೆಯಾಗಿರುವ ಪ್ರದೇಶಗಳ ವಿವರವನ್ನು ಈಗಾಗಲೇ ಅರಣ್ಯ ಇಲಾಖೆಯ ಐ.ಸಿ.ಟಿ ಶಾಖೆಯವರು ಸೃಷ್ಟಿರುವ ವೆಬ್‌ಪೋರ್ಟಲ್‌ನಲ್ಲಿ ಈಗಾಗಲೇ ದಾಖಲಿಸಿರುವ ಮಾಹಿತಿಯನ್ನು 95% ರಷ್ಟು ಪರಿಶೀಲಿಸಿದ್ದು, ಇನ್ನುಳಿದ ಮಾಹಿತಿಯನ್ನು ಆದಷ್ಟು ಬೇಗನೆ ಪರಿಶೀಲಿಸಿ, ಮುಂದಿನ ಸಭೆಯಲ್ಲಿ ಮಂಡಿಸುವುದಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ರವರು ಸಭೆಗೆ ತಿಳಿಸಿದರು. ಸದರಿ ಮಾಹಿತಿಯನ್ನು ತಯಾರಿಸಿ ಮುಂದಿನ ಸಭೆಯಲ್ಲಿ ಸಲ್ಲಿಸಲು ಸಮಿತಿಯು ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ರವರಿಗೆ ನಿರ್ದೇಶನ ನೀಡಲಾಯಿತು.

2. **RECORDED FORESTS: (ಸರ್ಕಾರಿ ದಾಖಲೆಗಳಲ್ಲಿ ದಾಖಲಿಸಲಾದ ಅರಣ್ಯ ಪ್ರದೇಶಗಳು)**

   ಅಧಿಸೂಚನೆಯಾಗದೇ ಇನ್ನುಳಿದ ಯಾವುದೇ ಸರ್ಕಾರಿ ದಾಖಲೆಗಳಲ್ಲಿ ದಿನಾಂಕ: 25-10-1980 ಅಥವಾ ಅದಕ್ಕಿಂತ ಪೂರ್ವದಲ್ಲಿ ಅರಣ್ಯವೆಂದು ದಾಖಲಿರುವ ಅರಣ್ಯ ಪ್ರದೇಶಗಳ ವಿವರಗಳು ವೆಬ್ ಪೋರ್ಟಲ್‌ನಲ್ಲಿ ಲಭ್ಯವಿದ್ದು, ಸದರಿ ದಾಖಲೆಯನ್ನು ಪರಿಶೀಲಿಸಿ, ದಾಖಲಿಸಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ರವರು ಸಭೆಗೆ ತಿಳಿಸಿದರು. ಸದರಿ ಸಭೆಯಲ್ಲಿ ವಿಡಿಯೋ ಸಂವಾದ ಮುಖಾಂತರ ಭಾಗವಹಿಸಿದ್ದ ಎಲ್ಲ ತಾಲೂಕುಗಳ ತಹಶೀಲ್ದಾರರಿಗೆ ಸಂಭಂಧಿಸಿದ ವಲಯ ಅರಣ್ಯಾಧಿಕಾರಿಗಳ ಸಹಾಯ ಪಡೆದು ಸದರಿ ದಾಖಲೆಗಳನ್ನು ಪರಿಶೀಲಿಸಿ ದಾಖಲಿಸಲು ಸಮಿತಿಯು ಎಲ್ಲ ತಹಶೀಲ್ದಾರರಿಗೆ ಹಾಗೂ ವಲಯ ಅರಣ್ಯಾಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

**3. Potential Forest Like Areas (PFLA): (ಸಂಭಾವ್ಯ ಅರಣ್ಯ ತರಹದ ಪ್ರದೇಶಗಳು)**

ಮುಂದುವರೆದು, ಮುಂದಿನ ಭಾಗವಾದ, Potential Forest Like Areas (PFLA) ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ರವರು ಸಭೆಗೆ ಮಾಹಿತಿ ನೀಡುತ್ತಾ, Karnataka State Remote Sensing Applications Centre (KSRSAC) ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ದವರು ಸ್ಯಾಟಲೈಟ್ ಚಿತ್ರಣದ ಮೂಲಕ Potential Forest Like Areas ಗಳನ್ನು ಗುರುತಿಸಿದ್ದು, ಈಗಾಗಲೇ ಡೀಮ್ಡ್ ಅರಣ್ಯ ಪ್ರದೇಶದ ಪಟ್ಟಿಯಲ್ಲಿರುವ ಅರಣ್ಯ ಪ್ರದೇಶಗಳನ್ನು ಸೇರಿಸಿ ಸದರಿ Potential Forest Like Areas ಪಟ್ಟಿಯಲ್ಲಿರುವ ಎಲ್ಲ ಪ್ರದೇಶಗಳನ್ನು ಕರ್ನಾಟಕ ಸರ್ಕಾರದ ಆದೇಶ FEE- 185 FAF 2011 BANGLORE DATED: 15-05-2014 ರಲ್ಲಿರುವ ಮಾನದಂಡಗಳಂತೆ ಪರಿಶೀಲಿಸಿ, ಈಗಾಗಲೇ ಹಿಂದಿನ ಸಭೆಯಲ್ಲಿ ಸೂಚಿಸಿದಂತೆ ತಾಲೂಕು ಮಟ್ಟದ ಜಂಟಿ ತಪಾಸಣಾ ತಂಡ (Joint Verification Team) ಹಾಗೂ ಜಂಟಿ ತಪಾಸಣಾ ತಂಡಕ್ಕೆ ಸಹಾಯ ಮಾಡಲು ತಾಲೂಕು ಮಟ್ಟದ ಜಂಟಿ ಸರ್ವೆ ತಂಡಗಳು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಮುಂದುವರೆದು, ಸದರಿ ಕ್ರಮವನ್ನು ಹೇಗೆ ಕೈಗೊಳ್ಳಬೇಕೆಂದು ಪವರ್‌ಪಾಯಿಂಟ್ ಪ್ರೆಸೆಂಟೇಷನ್ ಮುಖಾಂತರ ಸಭೆಯಲ್ಲಿದ್ದ ಎಲ್ಲರಿಗೂ ತಿಳಿಸಲಾಯಿತು. ಮುಂದುವರೆದು, ಸ್ಥಳ ಪರಿಶೀಲನೆ ತೆರಳಿದಾಗ ಅರಣ್ಯ ಇಲಾಖೆಯ **"ಅರಣ್ಯ ಭೂಮಿ"** ಆಂಡ್ರಾಯ್ಡ್ ಅಪ್ಲಿಕೇಷನ್ ನ ಸಹಾಯ ಪಡೆದು ದಾಖಲೆಗಳನ್ನು ಪರಿಶೀಲಿಸಲು ಸಹ ಮಾಹಿತಿ ನೀಡಲಾಯಿತು. ಸದರಿ ಮಾಹಿತಿ ನೀಡಿದ ನಂತರ ಸಭಾಧ್ಯಕ್ಷರು ಸಭೆಯ ಎಲ್ಲ ಸದಸ್ಯರಿಗೆ, ಏನಾದರೂ ತಾಂತ್ರಿಕ ಸಮಸ್ಯೆಗಳು ಇದ್ದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಲು ಕೋರುತ್ತಾ, ಸದರಿ ಪರಿಶೀಲನೆಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಲು ಸೂಚಿಸಿದರು.

ಮುಂದುವರೆದು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಿಭಾಗ, ಧಾರವಾಡ ರವರು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಿದರು.

ಜಿಲ್ಲಾಧಿಕಾರಿಗಳು
ಹಾಗೂ ಜಿಲ್ಲಾ ದಂಡಾಧಿಕಾರಿಗಳು,
ಧಾರವಾಡ ಜಿಲ್ಲೆ
ಹಾಗೂ ಅಧ್ಯಕ್ಷರು
ಜಿಲ್ಲಾ ಮಟ್ಟದ ತಜ್ಞ ಸಮಿತಿ.

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಧಾರವಾಡ
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
ಧಾರವಾಡ ವಿಭಾಗ, ಧಾರವಾಡ
ಹಾಗೂ ಸಂಚಾಲಕರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ

ಉಪ ನಿರ್ದೇಶಕರು,
ಭೂದಾಖಲೆ,
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ.

ಜಂಟಿ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,,
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ.

ಉಪ ನಿರ್ದೇಶಕರು,
ತೋಟಗಾರಿಕೆ ಇಲಾಖೆ
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ